**ದಿನಾಂಕಃ 22.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., ವಾದಿ ಪರ ವಕೀಲರಿಂದ**

ನಿಡಿ.55 ರಲ್ಲಿ ಲಕ್ಷ್ಮಿಬಾಯಿ ಗಂಡ ಮತ್ತು ಮಕ್ಕಳ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಮಾಹಿತಿ ಇಲ್ಲದ ಕಾರಣ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.55 ರಲ್ಲಿ ನಮೂದಿಸಿರುವ ಲೊಕ್ಯಾನಾಯ್ಕ ರವರ ಹೆಂಡತಿಯ ಹೆಸರು ವಿಜಯಬಾಯಿ ಎಂದರೆ ಸರಿ. ಸದರಿ ಲೋಕ್ಯಾನಾಯ್ಕ ರವರಿಗೆ ಹರಿದಾಸನಾಯ್ಕ, ಲಕ್ಷ್ಮನಾಯ್ಕ, ರವಿನಾಯ್ಕ, ಮಂಜುಳಾಬಾಯಿ ಮತ್ತು ಚಂದ್ರಶೇಖರ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ.

ನಿಡಿ.55 ರಲ್ಲಿ ಲೋಕ್ಯಾನಾಯ್ಕ ರವರ ಹೆಂಡತಿ ಮಕ್ಕಳ ಹೆಸರು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯ ತಿಪ್ಪೇಸ್ವಾಮಿ ರವರು ಪಡೆದಿದ್ದ ವಂಶವೃಕ್ಷವನ್ನು ನಾನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ತಿಪ್ಪೇಸ್ವಾಮಿ ರವರ ತಂದೆಯ ಹೆಸರು ಭದ್ರಾನಾಯ್ಕ, ಜಂಭಯ್ಯನಹಟ್ಟಿ ಗ್ರಾಮದವರಾಗಿರುತ್ತಾರೆ. ಸದರಿ ತಿಪ್ಪೇಸ್ವಾಮಿ ಹಾಲಿ ಜೀವಂತವಾಗಿರುತ್ತಾರೆ. ತಿಪ್ಪೇಸ್ವಾಮಿ ಮತ್ತು ನಮಗೆ ಯಾವುದೇ ಸಂಬಂದ ಇರುವುದಿಲ್ಲ. ತಿಪ್ಪೇಸ್ವಾಮಿ ಪಡೆದಿದ್ದ ವಂಶವೃಕ್ಷದ ಪ್ರತಿಯನ್ನು ನಾನು



ಸೆಕ್ರೆಟರಿ ರವರ ಕಡೆಯಿಂದ ಪಡೆದಿರುತ್ತೇನೆ. ನಿಡಿ.55 ಅನ್ನು ಪಡೆಯಲು ನಾನು ಸೆಕ್ರೆಟರಿ ರವರಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಿಡಿ.55 ರ ವಂಶವೃಕ್ಷವನ್ನು ಪಡೆಯಲು ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ನಿಡಿ.55 ವಂಶವೃಕ್ಷ ಪಡೆಯಲು ಮಾಹಿತಿಯನ್ನು ಹೇಳಿರುವುದಿಲ್ಲ. ನಿಡಿ.55 ರಲ್ಲಿ ಬರೆದಿರುವ ಮಾಹಿತಿಯು ಸತ್ಯವಾಗಿರುವ ಬಗ್ಗೆ ಜೀವಂತ ಇರುವ ವ್ಯಕ್ತಿಗಳ ಬಳಿ ವಿಚಾರಣೆ ಮಾಡಿರುವುದಿಲ್ಲ.

ನಿಡಿ.1 ಮತ್ತು 55 ರಲ್ಲಿ ಗೋಲ್ಯಾನಾಯ್ಕ ಎಂದು ಸಹಿ ಮಾಡಿರುವ ವ್ಯಕ್ತಿ ಒಬ್ಬರೇ ಆಗಿರುತ್ತಾರೆ. ಅದೇ ರೀತಿ ನಿಡಿ.1 ಮತ್ತು 55 ರಲ್ಲಿ ನಾಗಣ್ಣ ಎಂದು ಸಹಿ ಮಾಡಿರುವ ವ್ಯಕ್ತಿ ಒಬ್ಬರೇ ಆಗಿರುತ್ತಾರೆ. ಗೋಲ್ಯಾನಾಯ್ಕ ಮತ್ತು ನಾಗಣ್ಣನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದೇವಿಬಾಯಿ ಎಂದರೆ ಜಂಭಯ್ಯನಹಟ್ಟಿ ಗ್ರಾಮಸ್ಥರಾಗಿರುತ್ತಾರೆ. ದೇವಿಬಾಯಿರವರ ಗಂಡನ ಹೆಸರು ಲಕ್ಷ್ಮಾನಾಯ್ಕ.

ನಿಡಿ.1 ರಲ್ಲಿ ಆಂಗ್ಲ ಭಾಷೆಯಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವವರು ಯಾರು ಎಂದು ನನಗೆ ಗೊತ್ತಿಲ್ಲ. ನಿಡಿ.1 ಅನ್ನು ನಾಡಕಛೇರಿಯಲ್ಲಿ ಪಡೆದಿರುತ್ತೇನೆ.

ಎನ್. ಹೆಚ್. ನಾಯ್ಕ ರವರ ತಂದೆಯ ಹೆಸರು ನಂದ್ಯಾನಾಯ್ಕ ಆಗಿರುತ್ತದೆ. ನಮ್ಮ ವಂಶದಲ್ಲಿ ಎನ್ ಹೆಚ್ ನಾಯ್ಕ ಎಂದು ಯಾರು ಇಲ್ಲ ಎಂದರೆ ಸಾಕ್ಷಿಯು ಹುಸೇನ್ ನಾಯ್ಕ ರವರನ್ನು ಎನ್ ಹೆಚ್ ನಾಯ್ಕ ಎಂದು ಕರೆಯುತ್ತಿದೆದವು ಎಂದು ನುಡಿಯುತ್ತಾರೆ. ಸದರಿಯವರು ಹಾಲಿ ಜೀವಂತವಾಗಿರುವುದಿಲ್ಲ. ಹುಸೇನ್ ನಾಯ್ಕ ರವರನ್ನು ಎನ್ ಹೆಚ್ ನಾಯ್ಕ ಎಂದು ಕರೆಯುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ನಿಡಿ.2 ರಲ್ಲಿ ಚಂದ್ರಿಬಾಯಿ, ಲಕ್ಷ್ಮನಾಯ್ಕ ಹಾಗೂ ಶಾಂತಿಬಾಯಿರವರ ಮಕ್ಕಳ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಡಿ.2 ರಲ್ಲಿ ನಮೂದಿಸಿರುವ ವ್ಯಕ್ತಿಗಳು ಒಂದೇ ವಂಶಸ್ಥರಾಗಿರುತ್ತಾರೆ. ನಿಡಿ.2 ರಲ್ಲಿ ಲಕ್ಷ್ಮಿಬಾಯಿ ಬಿನ್ ಕಾಳ್ಯಾನಾಯ್ಕ ರವರ ಹೆಸರು ಇರುವುದಿಲ್ಲ ಎಂದರೆ ಸದರಿಯವರು ವಿವಾಹವಾಗಿ ಬೇರೆ ಊರಿನಲ್ಲಿ ಇರುವುದರಿಂದ ನಮ್ಮ ಊರಿನಲ್ಲಿ ಇದ್ದ ವಶಸ್ಥರ ಬಗ್ಗೆ ಮಾಹಿತಿ ತಿಳಿಸಿರುತ್ತೇವೆ. ಸದರಿ ಲಕ್ಷ್ಮಿಬಾಯಿ ಯಾವ ಸಾಲಿನಲ್ಲಿ ಮದುವೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ.2 ರ ದಾಖಲೆ 1977 ನೇ ಸಾಲಿನ ದಾಖಲೆ ಎಂದರೆ ಸರಿ. 1977 ಸಾಲಿನಲ್ಲಿ ಲಕ್ಷ್ಮಿಬಾಯಿ ರವರಿಗೆ ಮದುವೆಯಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಲಕ್ಷ್ಮಿಬಾಯಿ ರವರನು ನೋಡಿರುವುದಿಲ್ಲ.



ಲೋಕ್ಯಾನಾಯ್ಕ, ಭದ್ರಾನಾಯ್ಕ ಮತ್ತು ಲಕ್ಷ್ಮಾನಾಯ್ಕ ರವರನ್ನು ನೋಡಿರುತ್ತೇನೆ. ನಿಡಿ.3 ರಾಮ್ಜಿನಾಯ್ಕ ರವರ ತಂದೆ ಲಕ್ಷ್ಮನಾಯ್ಕ ರವರು ಕ್ರಯಕ್ಕೆ ಪಡೆದ ಸ್ವತ್ತಿನ ಕ್ರಯ ಪತ್ರವಾಗಿರುತ್ತದೆ ಎಂದರೆ ಮಾಹಿತಿ ಇಲ್ಲ. ಸದರಿ ದಾಖಲೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಲಕ್ಷ್ಮನಾಯ್ಕ ಜೀವಂತ ಇದ್ದಾಗ ಸ್ವತ್ತನ್ನು ಕ್ರಯಿಕ್ಕೆ ಪಡೆದಿದ್ದು, ಸದರಿಯವರು ಜೀವಂತ ಇದ್ದಾಗ ಕ್ರಯ ಪತ್ರ ನೊಂದಣಿಯಾಗದ ಕಾರಣ ಆತನ ಮಗ ರಾಮ್ಜಿನಾಯ್ಕ ರವರ ಹೆಸರಿನಲ್ಲಿ ಕ್ರಯಕ್ಕೆ ಪತ್ರವನ್ನು ನೊಂದಣಿ ಮಾಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ಲಕ್ಷ್ಮನಾಯ್ಕ ರವರೇ ಹಣವನ್ನು ನೀಡಿರುತ್ತಾರೆ ಎಂದರೆ ಸರಿ.

ನನಗೆ ಸೇರಿದ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಿಪಿ.1 ರ ಪ್ರಕಾರ ಲಕ್ಷ್ಮನಾಯ್ಕರವರಿಗೆ ಕೇಸರಿ ಬಾಯಿ ಹೆಂಡತಿಯಾಗಿದ್ದು, ರಾಮ್ಜಿನಾಯ್ಕ,

ನಂದ್ಯಾನಾಯ್ಕ ಮತ್ತು ಚಂದ್ರಾನಾಯ್ಕ ರವರು ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮ್ಮ ವಂಶಸ್ಥರಾಗಿರುತ್ತಾರೆ ಎಂದು ನುಡಿಯುತ್ತಾರೆ. ರಾಮ್ಜಿನಾಯ್ಕನ ಹೆಂಡತಿ ಹೆಸರು ಲಕ್ಷ್ಮಿ ಬಾಯಿ ಎಂದರೆ ಸರಿ. ನಂದ್ಯಾನಾಯ್ಕನ ಹೆಂಡತಿ ಹೆಸರು ನಾತಿಬಾಯಿ ಎಂದರೆ ಸರಿ. ಚಂದ್ರಾನಾಯ್ಕ 1 ನೇ ಹೆಂಡತಿ ಹೆಸರು ಜಂಗ್ಲಿಬಾಯಿ ಮತ್ತು 2 ನೇ ಹೆಂಡತಿ ಹೆಸರು ಲಕ್ಷ್ಮಿಬಾಯಿ ಎಂದರೆ ಸರಿಯಲ್ಲ. ನಿಪಿ.1 ಅನ್ನು ಗ್ರಾಮಲೆಕ್ಕಾಧಿಕಾರಿಗಳು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.